ಮೈಸೂರು ಜಿಲ್ಲೆಯಲ್ಲಿ ದಾಖಲಾಗಿರುವ ಕಾರ್ಮಿಕರ ಪ್ರಕರಣಗಳು

2220 (2570) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ): ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 11/10/1999ರ ನಂತರ ಮೈಸೂರು ಜಿಲ್ಲೆಯಲ್ಲಿ ದಾಖಲಾದ ಕಾರ್ಮಿಕರ ಪ್ರಕರಣಗಳು ಎಷ್ಟು; ಇದರಲ್ಲಿ ಕಾರ್ಮಿಕ ಅಸಂತುಷ್ಟಿ ಪ್ರಕರಣಗಳು ಎಷ್ಟು;

ಆ) ಕಾರ್ಮಿಕ ವಿವಾದದ ಕಾರಣ ಮುಚ್ಚಿರುವ ಕೈಗಾರಿಕೆಗಳು ಯಾವುವು; ರೋಗಗ್ರಸ್ತವಾಗಿರುವುದು ಯಾವುವು;

ಇ) ಇದನ್ನು ತಪ್ಪಿಸಲು ಕೈಗೊಂಡಿರುವ ಕ್ರಮವೇನು; ಕಾರ್ಮಿಕ ಪ್ರಕರಣ ಉದ್ಭವಿಸಲು ಮಾಲೀಕರೊಡನೆ ಶಾಮೀಲಾಗಿರುವ ಅಧಿಕಾರಿಗಳು ಯಾರು; ಇವರ ತೀರ್ಮಾನದಿಂದ ಉದ್ದಿಮೆ ನಷ್ಟಕ್ಕೆ ಗುರಿಯಾಗುತ್ತಿದೆ ಎಂಬ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ರೀತಿ ಕಾರ್ಮಿಕ ಪ್ರಕರಣ ಉದ್ಭವಿಸಲು ಕಾರಣವಾಗಿರುವ ಅಧಿಕಾರಿಗಳು ಯಾರು; ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಶ್ರೀ ಖಮರುಲ್ ಇಸ್ಲಾಂ (ಕಾರ್ಮಿಕ ಸಚಿವರು):

ಅ) 693 ಪ್ರಕರಣಗಳು. ಎಲ್ಲಾ ಪ್ರಕರಣಗಳು ಕಾರ್ಮಿಕರ ಅಸಂತುಷ್ಟಿ ಪ್ರಕರಣಗಳಾಗಿರುತ್ತವೆ.

ಆ) ಈ ಕೆಳಗೆ ತಿಳಿಸಿದಂತೆ ಒಂದು ಕೈಗಾರಿಕಾ ಸಂಸ್ಥೆಯು ಕಾರ್ಮಿಕರ ವಿವಾದದಿಂದ ಮುಚ್ಚಿದೆ ಮತ್ತು ಇನ್ನೊಂದು ಕೈಗಾರಿಕಾ ಸಂಸ್ಥೆಯು ರೋಗಗ್ರಸ್ತವಾಗಿದೆ.

1) ರಾಮಕೃಷ್ಣ ನರ್ಸಿಂಗ್ ಹೋಂ, ಮೈಸೂರು (ಮುಚ್ಚಿದೆ)

2) ಮೈಸೂರು ಪ್ಯಾನಲ್ ಅಂಡ್ ಬೋರ್ಡ್, ನಂಜನಗೂಡು (ರೋಗಗ್ರಸ್ತವಾಗಿದೆ)

ಇ) ಕೈಗಾರಿಕಾ ವಿವಾದಗಳನ್ನು ಸಂಧಾನದ ಮೂಲಕ ಇತ್ಯರ್ಥಪಡಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಕೆಲವು ಪ್ರಕರಣಗಳಲ್ಲಿ ಒಪ್ಪಂದ ಏರ್ಪಡಿಸಿ, ಇತ್ಯರ್ಥಪಡಿಸಿದೆ ಮತ್ತು ಸಂಧಾನ ವಿಫಲಗೊಂಡ ಪ್ರಕರಣಗಳನ್ನು ನ್ಯಾಯನಿರ್ಣಯಕ್ಕಾಗಿ ಕಾರ್ಮಿಕ ನ್ಯಾಯಾಲಯಗಳಿಗೆ ಒಪ್ಪಿಸಲಾಗಿದೆ. ಯಾವುದೇ ಅಧಿಕಾರಿಯು ಮಾಲೀಕರೊಂದಿಗೆ ಶಾಮೀಲಾದ ಕಾರಣ ಉದ್ದಿಮೆ ನಷ್ಟವಾದ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಈ) ಇಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಆದ್ದರಿಂದ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಅಕ್ರಮ ಜಮೀನು ಸಕ್ರಮೀಕರಣಗೊಳಿಸಲು ಅರ್ಜಿ ಸಲ್ಲಿಸಲು ಅವಕಾಶ ನೀಡುವ ಬಗ್ಗೆ

2221 (2366) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಕ್ರಮ ಜಮೀನು ಸಕ್ರಮೀಕರಣಗೊಳಿಸುವ ಬಗ್ಗೆ ಅರ್ಜಿ ಸಲ್ಲಿಸಲು ಬಹಳಷ್ಟು ಗ್ರಾಮಸ್ಥರು ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಅರ್ಜಿ ಸಲ್ಲಿಸಲು ವಂಚಿತರಾದ ಗ್ರಾಮಸ್ಥರಿಗೆ ಇನ್ನೊಮ್ಮೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗುವುದೇ;